

بِسْمِ اللّٰهِ الرَّحْمَنِ الرَّحِيم

# ವೈವಾಹಿಕ ಸಮಸ್ಯೆಗಳೂ ಇಸ್ಲಾಮ್ ನಿರ್ದೇಶಿಸುವ ಪರಿಹಾರ ಮಾರ್ಗಗಳೂ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 03-03-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಯುವಕರ ಮತ್ತು ಯುವತಿಯರ ವಿವಾಹಗಳ ಪ್ರಶ್ನೆ ಹಾಗೂ ವಿವಾಹದ ನಂತರ ಕುಟುಂಬದಲ್ಲಿ ತಲೆದೋರುವ ಸಮಸ್ಯೆಗಳು ಮನೆಗಳಲ್ಲಿ ಆತಂಕ ಉಂಟುಮಾಡುವವುಗಳಾಗಿರುತ್ತವೆ. ವಿವಾಹದ ನಂತರ ತಲೆದೋರುವ ಸಮಸ್ಯೆಗಳು ಪತಿ ಪತ್ನಿಯರ ಮಧ್ಯೆ ಮಾತ್ರವಲ್ಲ ಎರಡು ಕಡೆಯವರ ತಂದೆ ತಾಯಂದಿರನ್ನು ಸಹ ಈ ಸಮಸ್ಯೆಗಳು ಬಾಧಿಸುತ್ತವೆ. ಅಷ್ಟು ಮಾತ್ರವಲ್ಲ ಮಕ್ಕಳು ಹುಟ್ಟಿದ್ದರೆ ಈ ಆತಂಕವು ಆ ಮಕ್ಕಳನ್ನು ಸಹ ಬಾಧಿಸುತ್ತದೆ. ಕೆಲವು ಸಾರಿ ಮಕ್ಕಳು ಈ ಕಾರಣದಿಂದ ಲೌಕಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಬಿಗಡಾಯಿಸುತ್ತಾ ಇರುತ್ತಾರೆ ಮತ್ತು ತಂದೆ ತಾಯಂದಿರಿಗೂ ಕುಟುಂಬದ ಇತರರಿಗೂ ಆತಂಕದಾಯಕರಾಗುತ್ತಾರೆ. ಈ ರೀತಿ ಆತಂಕದ ಒಂದು ಸರಪಳಿಯೇ ಪ್ರಾರಂಭವಾಗುತ್ತದೆ. ಇಂತಹ ವಿಷಯಗಳಿಗೆ ಸಂಬಂಧಿಸಿ ಸಾಮಾನ್ಯವಾಗಿ ನನಗೆ ಪ್ರತಿದಿನ ಪತ್ರಗಳು ಬರುತ್ತಾ ಇರುತ್ತವೆ. ಜನರು ನನ್ನೊಂದಿಗೆ ಬೇಟಿಯಾಗುವಾಗ ಸಹ ತಮ್ಮ ಈ ರೀತಿಯ ಸಮಸ್ಯೆಗಳನ್ನು ವಿವರಿಸುತ್ತಾರೆ. ಒಂದು ಕಡೆ ಹುಡುಗಿಯರ ವಿವಾಹದ ಸಮಸ್ಯೆ ಹೇಗಿರುತ್ತದೆ ಎಂದರೆ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ ಎಂದು ಹೇಳಿ ವಿವಾಹವನ್ನು ಸರಿಯಾದ ವಯಸ್ಸಿನಲ್ಲಿ ಮಾಡಿಸುವುದಿಲ್ಲ. ವಿವಾಹ ಜರಗಿದ ನಂತರ ಪರಸ್ಪರ ಅರ್ಥ ಮಾಡಿಕೊಳ್ಳುವುದಿಲ್ಲ ಎಂಬ ನೆವನ ಹೇಳಿ ವಿವಾಹ ಸಂಬಂಧದಲ್ಲಿ ಒಡಕು ಉಂಟಾಗುತ್ತದೆ. ಕೆಲವು ಹುಡುಗಿಯರಿಗೆ ಸಂಬಂಧಿಸಿ ಹೇಳುವುದಾದರೆ ಅವರ ಸ್ನೇಹಿತೆಯರು ಅವರ ಮನಸ್ಸಿನಲ್ಲಿ ತಪ್ಪು ಯೋಚನೆಗಳನ್ನು ಸೃಷ್ಟಿಸುತ್ತಾರೆ. ಕೆಲವು ಸಾರಿ ತಂದೆ ತಾಯಂದಿರು ಸ್ವತಃ ತಮ್ಮ ಮಕ್ಕಳಿಗೆ ಎಂತಹ ವಿಷಯಗಳನ್ನು ಕಲಿಸುತ್ತಾರೆಂದರೆ ಆ ಕಾರಣದಿಂದ ಹುಡುಗ ಹುಡುಗಿಯರ ಮಧ್ಯೆ, ಎಂದರೆ ಪತಿ ಪತ್ನಿಯರ ಮಧ್ಯೆ ವಿಶ್ವಾಸ ಕೊನೆಗೊಳ್ಳುತ್ತದೆ. ಅಥವಾ ಸಂಶಯಗಳೂ ಸಂದೇಹಗಳೂ ತಲೆದೋರುತ್ತವೆ. ಖೇದಕರವಾದುದೇನೆಂದರೆ ಪಾಕಿಸ್ಥಾನದಿಂದ ಇಲ್ಲಿಗೆ ವಿವಾಹಿತೆಯಾಗಿ ಬರುವ ಕೆಲವು ಹುಡುಗಿಯರು ಪಾಶ್ಚಿಮಾತ್ಯ ದೇಶಗಳಲ್ಲಿರುವ ಸ್ವಾತಂತ್ರ್ಯವನ್ನು ನೋಡಿ ಅದರಿಂದ ಪ್ರಭಾವಿತರಾಗಿ ತಪ್ಪು ಆವಶ್ಯಕತೆಗಳನ್ನು ಮುಂದಿರಿಸಲು ಪ್ರಾರಂಭಿಸುತ್ತಾರೆ. ಕೆಲವು ಸಾರಿ ದಾಂಪತ್ಯ ಜೀವನ ಪ್ರಾರಂಭಿಸುವ ಮೊದಲೇ ಇಲ್ಲಿಗೆ ಬಂದು ಸಂಬಂಧ ಮುರಿದು ಹಾಕುತ್ತಾರೆ. ಹುಡುಗಿಯರು ಮಾತ್ರವಲ್ಲ ಹುಡುಗರೂ ಸಹ ಕೆಲವೊಮ್ಮೆ ಈ ರೀತಿ ಮಾಡುತ್ತಾರೆ. ಹುಡುಗರಿಗಿಂತ ಹುಡುಗಿಯರ ಪ್ರಮಾಣ ಹೆಚ್ಚಿಗೆಯೇ ಇದೆ. ಇದಕ್ಕೆ ಕಾರಣವೇನೆಂದರೆ ಬಹುತೇಕ ಹುಡುಗರು ಮತ್ತು ಹುಡುಗಿಯರು ಖೌಲೇ ಸದೀದ್ (ನೇರಮಾತು) ಅನುಷ್ಠಾನಕ್ಕೆ ತರುವುದಿಲ್ಲ. ಸರಿಯಾದ ಮತ್ತು ಪೂರ್ಣವಾದ ವಿವರ ಒಬ್ಬರಿನ್ನೊಬ್ಬರಿಗೆ ತಿಳಿಸಿರುವುದಿಲ್ಲ. ಕೆಲವು ಸಾರಿ ತಂದೆ ತಾಯಂದಿರು ತಮ್ಮ ಹೆಣ್ಣು ಮಕ್ಕಳನ್ನು ಬಲಾತ್ಕಾರದಿಂದ ವಿವಾಹಕ್ಕೆ ಒಪ್ಪಿಸುತ್ತಾರೆ. ಅದೆಲ್ಲಾ ಮುಂದೆ ಸರಿಯಾಗುವುದು ಎಂದು ಅವರು ಭಾವಿಸುತ್ತಾರೆ. ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಮತ್ತು ಜೀವಿತ ರೀತಿಗೆ ಸಂಬಂಧಿಸಿ ಸಮನ್ವಯತೆ ಇಲ್ಲದ ಸಂಬಂಧಗಳು ಸ್ಥಾಪಿಸಲ್ಪಡುತ್ತವೆ.

ಹುಡುಗರು, ಹುಡುಗಿಯರು, ಪತಿಯ ತಂದೆ ತಾಯಂದಿರು, ಪತ್ನಿಯ ತಂದೆ ತಾಯಂದಿರು ಇವರ ಪೈಕಿ ಯಾರ ಮೇಲೆಯೂ ನೂರಕ್ಕೆ ನೂರರಷ್ಟು ದೋಷಾರೋಪ ಮಾಡಲು ಸಾಧ್ಯವಿಲ್ಲ. ಕೆಲವು ಪರಿಸ್ಥಿತಿಗಳಲ್ಲಿ ತಪ್ಪು ಹುಡುಗರದಾಗಿರುತ್ತದೆ. ಕೆಲವು ಸಾರಿ ಹುಡುಗಿಯರು ತಪ್ಪುಗಾರರಾಗಿರುತ್ತಾರೆ. ನಾನು ಹೇಳಿದ ಹಾಗೆ ಈ ಕೌಟುಂಬಿಕ ಸಮಸ್ಯೆಗಳು ಮಕ್ಕಳ ಮೇಲೆಯೂ ಪ್ರಭಾವ ಬೀರುತ್ತವೆ. ತಂದೆ ತಾಯಂದಿರು ಬೇರೆಯಾದ ನಂತರ ಮಕ್ಕಳು ಯಾರ ಜೊತೆ ಜೀವಿಸುತ್ತಿದ್ದರೂ ಅವರು ಮಾನಸಿಕವಾಗಿಯೂ ನೈತಿಕವಾಗಿಯೂ ಇತರ ರೀತಿಯಲ್ಲೂ ಒತ್ತಡಕ್ಕೆ ಗುರಿಯಾಗುತ್ತಾರೆ. ಪತಿ ಪತ್ನಿಯರಿಗೆ ಸಂಬಂಧಿಸಿ ಪತ್ನಿಯ ತಂದೆ ತಾಯಂದಿರು ಸಹ ಹಸ್ತಕ್ಷೇಪ ಮಾಡುತ್ತಾರೆ. ಸರಿಯಾದ ಸ್ಥಿತಿಗತಿಗಳನ್ನು ಮೊದಲೇ ತಿಳಿಸದ ಕಾರಣ ದೂರುಗಳು ತಲೆದೋರುತ್ತವೆ. ನಾನು ಹೇಳಿದ ಹಾಗೆ ಇದಕ್ಕೆಲ್ಲ ಮುಖ್ಯ ಕಾರಣ, ಅತ್ಯಂತ ಆವಶ್ಯಕವಾಗಿರುವ ಖೌಲೇ ಸದೀದ್ ಬಳಸದಿರುವುದೇ ಆಗಿದೆ. ಇದೇ ರೀತಿ ಕೆಲವು ಸಾರಿ ಹುಡುಗಿಯರ ಹೃದಯದಲ್ಲಿ ಹುಡುಗ ಮತ್ತು ಅವನ ಮನೆಯವರ ಬಗ್ಗೆ ಕೆಟ್ಟ ಭಾವನೆಗಳು ಸೃಷ್ಟಿಯಾಗುತ್ತವೆ. ಉದಾಹರಣೆಗೆ ಹುಡುಗಿಯ ತಾಯಿ ಮತ್ತು ಸಂಬಂಧಿಕರ ಮುಂದೆ ಹುಡುಗನ ಕಡೆಯವರು ನಮ್ಮ ಹುಡುಗ ಹಾಗಿದ್ದಾನೆ, ಹೀಗಿದ್ದಾನೆ ಎಂದೆಲ್ಲಾ ವರ್ಣಿಸಿ ಹುಡುಗಿಯನ್ನು ಯಾವುದಾದರೂ ರೀತಿಯಲ್ಲಿ ಕೀಳು ಎಂದು ಸಾಬೀತುಗೊಳಿಸಲು ಪ್ರಯತ್ನಿಸುತ್ತಾರೆ. ಅದೇ ರೀತಿ ಹುಡುಗ ಹುಡುಗಿಯರ ವೈವಾಹಿಕ ಸಂಬಂಧದಲ್ಲಿಯೂ ಹುಡುಗನ ಕಡೆಯವರ ಹಸ್ತಕ್ಷೇಪವೂ ಇರುತ್ತದೆ. ಅಂತೆಯೇ ಕೆಲವು ಸಲ ಹುಡುಗಿಯರು ದೂರುತ್ತಾರೆ. ಹುಡುಗರು ತಮ್ಮ ವೈವಾಹಿಕ ಹೊಣೆಗಾರಿಕೆಗಳನ್ನು ಈಡೇರಿಸುತ್ತಾ ಇಲ್ಲ, ಅವರಿಗೆ ತಮ್ಮ ಹೊಣೆಗಾರಿಕೆಗಳ ಬಗ್ಗೆ ಶ್ರದ್ಧೆ ಇಲ್ಲ ಎಂದು. ಒಟ್ಟಾರೆ ಹೇಳುವುದಾದರೆ ದೂರುಗಳ ಈ ಶೃಂಖಲೆ ಜಾರಿಯಲ್ಲಿ ಇರುತ್ತದೆ. ಎರಡು ಕಡೆಗಳಿಂದಲೂ ಇದು ಚಲಿಸುತ್ತಾ ಇರುತ್ತದೆ.

ಈರೀತಿಯ ವಿವಿಧ ವಯಸ್ಸಿನ ಜನರ ಕೌಟುಂಬಿಕ ಸಮಸ್ಯೆಗಳ ಕಾರಣವನ್ನು ಒಂದು ವಾಕ್ಯದಲ್ಲಿ ಹೇಳುವುದಾದರೆ, ಧರ್ಮದಿಂದ ದೂರ ಸರಿದಿರುವುದು, ಧರ್ಮದ ಬಗ್ಗೆ ಅಜ್ಞಾನ ಮತ್ತು ಧರ್ಮದ ಬಗ್ಗೆ ನಿರಾಸಕ್ತಿ ಮತ್ತು ಲೌಕಿಕ ವಸ್ತುಗಳ

ಗಳಿಕೆ ಬಗ್ಗೆ ಆಸಕ್ತಿಯೇ ಇದಕ್ಕೆಲ್ಲಾ ಮುಖ್ಯ ಕಾರಣವಾಗಿದೆ. ಆದುದರಿಂದ ಈ ಸಮಸ್ಯೆಗಳಿಗೆ ಪರಿಹಾರವನ್ನು ಧಾರ್ಮಿಕ ಉಪದೇಶಗಳ ಬೆಳಕಿನಲ್ಲಿ ಹುಡುಕಬೇಕಾಗಿದೆ. ನಾವು ಅಹ್ಮದಿಯರೆಂದು ಹೇಳುತ್ತೇವೆ. ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತೇವೆಂದು ಹೇಳುತ್ತೇವೆ. ಹೀಗಿರುವಾಗ ನಾವು ಧಾರ್ಮಿಕ ಉಪದೇಶಗಳ ಬೆಳಕಿನಲ್ಲಿ ಈ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕಾಗಿದೆ. ಪವಿತ್ರ ಖುರ್‌ಆನ್, ಹದೀಸುಗಳು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳ ಮೂಲಕ ಪರಿಹಾರ ಹುಡುಕಬೇಕಾಗಿದೆ. ನಾವು ಮುಸ್ಲಿಮರಾಗಿರುವುದು ನಮ್ಮ ಸೌಭಾಗ್ಯವಾಗಿದೆ. ಅನಂತರ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ್ದೇವೆ. ಅವರು ನಮ್ಮಿಂದ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಬೇಕೆಂಬ ಪ್ರತಿಜ್ಞೆ ಪಡೆದಿದ್ದಾರೆ. ನಾವು ಈ ಪ್ರತಿಜ್ಞೆಯನ್ನು ವಿವಿಧ ಸಂದರ್ಭಗಳಲ್ಲಿ ಪುನರುಚ್ಚರಿಸುತ್ತೇವೆ. ಆದರೆ ಅದರ ಪ್ರಕಾರ ಕಾರ್ಯ ಮಾಡುವ ಸಂದರ್ಭ ಬಂದಾಗ ನಾವು ಆ ಪ್ರತಿಜ್ಞೆಯನ್ನು ಮರೆತು ಬಿಡುತ್ತೇವೆ. ವಿವಾಹಗಳ ಸಂದರ್ಭಗಳಲ್ಲಂತೂ ಧರ್ಮದ ಸೇವೆ ಮಾಡುತ್ತಿರುವುದಾಗಿ ಬಾಹ್ಯವಾಗಿ ಕಾಣಿಸುತ್ತಿರುವ ಗಣ್ಯರು ಸಹ ಆ ಪ್ರತಿಜ್ಞೆ ಮರೆತು ಬಿಡುತ್ತಾರೆ. ವಾಸ್ತವಿಕವಾಗಿ ವಿವಾಹದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಗೆ ವಿಶಿಷ್ಟ ಮಾರ್ಗದರ್ಶನ ನೀಡಿದ್ದಾರೆ. ಧರ್ಮಕ್ಕೆ ಲೌಕಿಕ ವ್ಯವಹಾರಗಳ ಮೇಲೆ ಆದ್ಯತೆ ನೀಡಬೇಕೆಂದು ಹೇಳಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ನುಡಿಗಳನ್ನು ಯಾವಾಗಲೂ ನೆನಪಿಡಬೇಕು. ವಿವಾಹ ಸಂಬಂಧ ಸ್ಥಾಪಿಸುವಾಗ ಯಾವುದಕ್ಕೆ ಆದ್ಯತೆ ನೀಡಬೇಕೆಂದು ಅವರು ವಿವರಿಸಿದ್ದಾರೆ. ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸ್ತ್ರೀಯರನ್ನು ನಾಲ್ಕು ಕಾರಣಗಳಿಂದ ವಿವಾಹ ಮಾಡಿಕೊಳ್ಳಲಾಗುತ್ತದೆ. ಆಕೆಯ ಸಂಪತ್ತಿನ ಕಾರಣದಿಂದ, ಆಕೆಯ ಕುಲಗೋತ್ರದ ಕಾರಣದಿಂದ ಎಂದರೆ ಅವಳ ಕುಟುಂಬದ ಕಾರಣದಿಂದ, ಅವಳ ಸೌಂದರ್ಯದ ಕಾರಣದಿಂದ ಮತ್ತು ಅವಳ ಧಾರ್ಮಿಕತೆಯ ಕಾರಣದಿಂದ. ನೀವು ಧರ್ಮನಿಷ್ಠೆ ಮಹಿಳೆಯನ್ನು ಆಯ್ಕೆ ಮಾಡಿರಿ. ಅಲ್ಲಾಹನು ನಿಮಗೆ ಒಳಿತನ್ನುಂಟು ಮಾಡಲಿ. ವಿವಾಹವಾಗಲಿರುವ ಹುಡುಗನು ಮತ್ತು ಅವನ ಮನೆಯವರು ಈ ವಿಷಯವನ್ನು ತಮ್ಮ ಮುಂದಿರಿಸಿ ಕಾರ್ಯಪ್ರವೃತ್ತರಾಗುವುದಾದರೆ, ಧರ್ಮಕ್ಕೆ ಆದ್ಯತೆ ನೀಡಲು ಪ್ರಾರಂಭಿಸಿದರೆ, ಹುಡುಗ ಹುಡುಗಿ ಮತ್ತು ಅವರ ಮನೆಯವರ ಬಗ್ಗೆ ಹುಟ್ಟುವ ದೂರುಗಳು ಮತ್ತು ಭಿನ್ನಾಭಿಪ್ರಾಯಗಳು ದೂರ ಸರಿಯುವುವು. ಧರ್ಮನಿಷ್ಠ ಹುಡುಗಿಯನ್ನು ಹುಡುಕುವ ಹುಡುಗನು ಸ್ವತಃ ಧರ್ಮಕ್ಕೆ ಆದ್ಯತೆ ನೀಡುವವನಾಗುವನು ಮತ್ತು ತನ್ನ ಕರ್ಮಗಳನ್ನು ಧಾರ್ಮಿಕ ತತ್ವಗಳಿಗನುಸಾರವಾಗಿ ಮಾಡಲು ಪ್ರಾರಂಭಿಸುವನು. ಧಾರ್ಮಿಕ ತತ್ವಗಳ ಪ್ರಕಾರ ಕಾರ್ಯನಿರ್ವಹಿಸುವವನ ಮನೆಯಲ್ಲಿ ಅನಾವಶ್ಯಕವಾಗಿ ಚಿಕ್ಕ ಪುಟ್ಟ ವಿಷಯಗಳ ಬಗ್ಗೆ ಜಗಳ ಇರಲಾರದು. ಅಂತಹ ಹುಡುಗನ ಮನೆಯವರು ಹುಡುಗಿಗೆ ಕಷ್ಟ ನೀಡುವವರೂ ಆಗಲಾರರು.

ಇಸ್ಲಾಮ್ ನೀಡುವ ಮತ್ತೊಂದು ಮುಖ್ಯ ಉಪದೇಶ, ವಿವಾಹ ಸಂಬಂಧ ಸ್ಥಾಪಿಸುವ ಮೊದಲು ಇಸ್ತಿಖಾರ ಪ್ರಾರ್ಥನೆ ಮಾಡಬೇಕೆಂದಾಗಿದೆ. ಸಂಬಂಧ ಸ್ಥಾಪನೆಯಲ್ಲಿ ಒಳಿತನ್ನು ಅಲ್ಲಾಹನಿಂದ ಬೇಡಿಕೊಳ್ಳಬೇಕು. ಅಲ್ಲಾಹನ ದೃಷ್ಟಿಯಲ್ಲಿ ಈ ಸಂಬಂಧ ಒಳ್ಳೆಯದಲ್ಲವಾದರೆ ಅದರಲ್ಲಿ ತಡೆಯುಂಟಾಗಲು ಬೇಡಿಕೊಳ್ಳಬೇಕು. ಇದಕ್ಕೆ ಸಂಬಂಧಿಸಿ ಒಂದು ಸಂದರ್ಭದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಬಹಳ ಸುಂದರವಾದ ರೀತಿಯಲ್ಲಿ ವಿವರಿಸಿದ್ದಾರೆ. ಅವರು ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಗೆ ಬಹಳ ಉಪಕಾರ ಮಾಡಿದ್ದಾರೆ. ಅವರು ನಮಗೆ ಎಂತಹ ಮಾರ್ಗ ತೋರಿಸಿದ್ದಾರೆಂದರೆ ನಾವು ಅದರ ಪ್ರಕಾರ ಕಾರ್ಯನಿರತರಾದರೆ ಇನ್‌ಶಾಅಲ್ಲಾಹ್ ವಿವಾಹ ಖಂಡಿತವಾಗಿಯೂ ಸುಖದಾಯಕವಾಗುವುದು. ಎಲ್ಲದಕ್ಕಿಂತ ಮೊದಲು ಹೇಳಿದುದು ಧರ್ಮವನ್ನು ಹುಡುಕಬೇಕೆಂದು. ಸೌಂದರ್ಯದ ಆಕರ್ಷಣೆ, ಸಂಪತ್ತಿನ ಗಳಿಕೆ, ವಂಶದ ಹಿರಿಮೆ ಇವುಗಳಿಗೆ ಮಹತ್ವ ನೀಡಬಾರದೆಂದು. ಈ ಪ್ರಥಮ ಸಂಕಲ್ಪ ಒಳ್ಳೆಯದಾಗಿರಬೇಕು. ಅನಂತರದ ಕೆಲಸ ವಿವಾಹಕ್ಕೆ ಮೊದಲು ಇಸ್ತಿಖಾರ ಪ್ರಾರ್ಥನೆ ಮಾಡುವುದಾಗಿದೆ. ಅಲ್ಲಾಹನೊಂದಿಗೆ ಬೇಡಿಕೊಳ್ಳಬೇಕು, ನನ್ನ ಈ ವಿವಾಹ ಹೃದಯಕ್ಕೆ ಸಾಂತ್ವನ ನೀಡುವುದೂ, ಒಳಿತು ಉಂಟುಮಾಡುವುದೂ ಆಗಿದ್ದರೆ ಈ ವಿವಾಹ ನಡೆಯಲಿ ಎಂದು. ಆಗ ವಿವಾಹ ಜೀವನ ಅಲ್ಲಾಹನ ಅನುಗ್ರಹದಿಂದ ಬಹಳ ವಿಜಯಕರವಾಗಿ ಮುಂದುವರಿಯುವುದು. ಆದರೆ ನೆನಪಿಡಬೇಕಾದುದೇನೆಂದರೆ ವಿವಾಹದ ನಂತರ ಸಹ ಶೈತಾನನು ಆಕ್ರಮಣ ಮಾಡುತ್ತಾ ಇರುತ್ತಾನೆ. ಆದುದರಿಂದ ವಿವಾಹ ಯಾವಾಗಲೂ ಸಮಾಧಾನದಿಂದಲೂ ಪ್ರೀತಿಯಿಂದಲೂ ಮುಂದುವರಿಯಲಿ ಎಂದು ಯಾವಾಗಲೂ ಪ್ರಾರ್ಥಿಸುತ್ತಾ ಇರಬೇಕು.

ಖಲೀಫತುಲ್ ಮಸೀಹ್ ಅವ್ವಲ್ ಇಸ್ತಿಖಾರ ಪ್ರಾರ್ಥನೆಯ ಮಹತ್ವದ ಬಗ್ಗೆ ಉಪದೇಶಿಸುತ್ತಾ ಮತ್ತೊಮ್ಮೆ ಹೇಳಿದರು: ದೊಡ್ಡ ದೊಡ್ಡ ಕೆಲಸಗಳಲ್ಲಿ ಒಂದು ವಿವಾಹ ಸಹ ಆಗಿದೆ. ನಮಗೆ ಅಂತಿಮ ಪರಿಣಾಮ ಏನೆಂದು ತಿಳಿಯದು. ಆದರೆ ಅಲ್ಲಾಹನು ಅದೃಶ್ಯಗಳನ್ನು ಅರಿತವನಾಗಿದ್ದಾನೆ. ಆದುದರಿಂದ ಬಹಳ ಹೆಚ್ಚು ಇಸ್ತಿಖಾರ ಪ್ರಾರ್ಥನೆ ಮಾಡಿರಿ. ಅವನಿಂದ ಸಹಾಯವನ್ನು ಬೇಡಿಕೊಳ್ಳಿರಿ.

ನಿಕಾಹ್ ಸಂದರ್ಭದಲ್ಲಿ ಪಠಿಸಲಾಗುವ ಪವಿತ್ರ ಖುರ್‌ಆನ್ ವಚನಗಳನ್ನು ಉಲ್ಲೇಖಿಸಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೀಗೆ ಹೇಳಿದರು: ಪವಿತ್ರ ಖುರ್‌ಆನಿನ ಈ ವಚನಗಳಲ್ಲಿ ತಖ್ವವನ್ನು ಅವಲಂಬಿಸಬೇಕೆಂದು, ರಕ್ತ ಸಂಬಂಧಿಗಳ ಬಗ್ಗೆ ಗಮನ ಹರಿಸಬೇಕೆಂದು, ಖೌಲೇ ಸದೀದ್ (ನೇರಮಾತು) ಆಡಬೇಕೆಂದು ಉಪದೇಶಿಸಲಾಗಿದೆ. ನೀವು ನಿಮ್ಮ ಪರಲೋಕ ಜೀವಿತಕ್ಕೆ ಬೇಕಾಗಿ ಏನನ್ನು ಕಳುಹಿಸಿದ್ದೀರಿ ಎಂದು ಪರಿಶೋಧಿಸಿರಿ. ನೀವು ಜೀವಿತದಲ್ಲಿ ಜಯಗಳಿಸಬೇಕಾದರೆ ತಖ್ವ ಅವಲಂಬಿಸುವುದು ಆವಶ್ಯಕವಾಗಿದೆ. ವಿವಾಹದ ಸಂದರ್ಭದಲ್ಲಿ ಶುಭಕೋರುವ ಕುರಿತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು

ಅಲೈಹಿ ವಸಲ್ಲಮರು ಕಲಿಸಿದ ಪ್ರಾರ್ಥನೆ ಹೀಗಿದೆ: **ಬಾರಕಲ್ಲಾಹು ಲಕ, ವ ಬಾರಕ ಅಲೈಕ, ವ ಜಮಅ ಬೈನಕುಮಾ ಫಿಲ್‌ಖೈರ್**. ಅಲ್ಲಾಹನು ನಿಮಗೆ ಅನುಗ್ರಹ ನೀಡಲಿ. ನಿಮ್ಮಿಬ್ಬರ ಮೇಲೆ ಅನುಗ್ರಹ ಸುರಿಯಲಿ. ನಿಮ್ಮಿಬ್ಬರನ್ನು ಒಳಿತಿನಲ್ಲಿ ಒಗ್ಗೂಡಿಸಲಿ.

ಆದುದರಿಂದ ಪ್ರತಿ ಸಂದರ್ಭದಲ್ಲಿ ಒಳಿತನ್ನು ಆಶಿಸಿ ಪ್ರಾರ್ಥಿಸುವುದಾದರೆ ವಿವಾಹ ಸಂಬಂಧ ಅನುಗ್ರಹಭರಿತವಾಗುತ್ತದೆ. ಕೆಲವು ಜನರು ಪಾಕಿಸ್ಥಾನ ಮತ್ತು ಹಿಂದೂಸ್ಥಾನದ ಪರಿಸರದ ಪ್ರಭಾವದಿಂದ ಕುಟುಂಬ, ಜಾತಿ ಮೊದಲಾದುವುಗಳಲ್ಲಿ ಮಗ್ನರಾಗಿದ್ದಾರೆ. ಅಲ್ಲಾಹನು ಹೇಳುವುದೇನೆಂದರೆ ವಿವಾಹ ಸಂಬಂಧದ ಪ್ರಸ್ತಾಪ ಬಂದಾಗ ಪ್ರಾರ್ಥಿಸಬೇಕೆಂದು. ಇಸ್ತಿಖಾರ ಮಾಡಬೇಕೆಂದು. ಧರ್ಮಕ್ಕೆ ಆದ್ಯತೆ ನೀಡಬೇಕೆಂದು. ಆದರೆ ಕೆಲವರು ಧರ್ಮಕ್ಕೆ ಆದ್ಯತೆ ನೀಡದೆ ಕುಲಗೋತ್ರಗಳಿಗೆ ಆದ್ಯತೆ ನೀಡುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವಿವಾಹ ಸಂಬಂಧ ಸ್ಥಾಪನೆ ಮಾಡುವಾಗ ನೋಡಬೇಕಾದುದು ಸಾತ್ವಿಕ ವ್ಯಕ್ತಿಯಾಗಿರಬೇಕು, ಒಳ್ಳೆಯ ಪ್ರಕೃತಿಯ ವ್ಯಕ್ತಿಯಾಗಿರಬೇಕು, ಯಾವುದಾದರೂ ವಿಪತ್ತಿಗೆ ಪಾತ್ರನಾಗಿ ಪರೀಕ್ಷೆಗೆ ಗುರಿಯಾಗುವವನಾಗಬಾರದು ಎಂದು. ಧರ್ಮದಲ್ಲಿ ಕುಲಗೋತ್ರಗಳಿಗೆ ಪರಿಗಣನೆ ಇಲ್ಲ. ತಖ್ವ ಮತ್ತು ಸಾತ್ವಿಕತೆ ಬಗ್ಗೆ ಮಾತ್ರ ಗಮನಿಸಬೇಕು. ಆದುದರಿಂದ ಮೂಲಭೂತ ತತ್ವ ತಖ್ವವನ್ನು ನೋಡುವುದಾಗಿದೆ. ಉಳಿದವುಗಳು ನವೀನಾಚರಣೆಗಳಾಗಿವೆ. ಆದರೆ ಕುಫೂ ಬಗ್ಗೆ ಗಮನಿಸಬೇಕೆಂದು ಉಪದೇಶಿಸಲಾಗಿದೆ. ಅದರ ಬಗ್ಗೆ ಆವಶ್ಯಕವಾಗಿ ಗಮನ ಹರಿಸಬೇಕು. ಆದರೆ ಅದರ ಬಗ್ಗೆ ಕರ್ಕಶ ಭಾವನೆ ಸರಿಯಲ್ಲ.

ಕೆಲವು ಜನರಿಗೆ ತಮ್ಮ ವಂಶದ ಬಗ್ಗೆ ಬಹಳ ಅಭಿಮಾನವಿರುತ್ತದೆ. ಇಂತಹ ಒಬ್ಬ ವ್ಯಕ್ತಿಯನ್ನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಚೆನ್ನಾಗಿ ಹಿಡಿಗೂಡಿದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಬಳಿಗೆ ಒಬ್ಬ ವ್ಯಕ್ತಿ ಬಂದು ಹೇಳಿದರು: ನಾನು ಸೈಯದ್ ಕುಟುಂಬಕ್ಕೆ ಸೇರಿದವನಾಗಿದ್ದೇನೆ. ನನ್ನ ಮಗಳಿಗೆ ವಿವಾಹ ನಿಶ್ಚಯವಾಗಿದೆ. ತಾವು ನನಗೆ ಸ್ವಲ್ಪ ಸಹಾಯ ಮಾಡಬೇಕು ಎಂದು ಹೇಳಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಮಗಳು ಫಾತಿಮರಿಗೆ ಏನೇನು ಸಾಮಗ್ರಿಗಳನ್ನು ವಿವಾಹದ ಸಂದರ್ಭದಲ್ಲಿ ಕೊಟ್ಟರೋ ಅಷ್ಟು ನಾನು ಸಹ ತಮಗೆ ಕೊಡುವೆನು ಎಂದು ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು. ಆ ವ್ಯಕ್ತಿ ಈ ಮಾತನ್ನು ಆಲಿಸಿ ಹೇಳಿದರು: ನೀವು ನನ್ನ ಮೂಗನ್ನು ಕತ್ತರಿಸಲು ಇಚ್ಛಿಸುತ್ತೀರಿ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: ಏನು ನಿಮ್ಮ ಮೂಗು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಗಿಗಿಂತಲೂ ದೊಡ್ಡದಾಗಿದೆಯೇ?

ಕೆಲವು ಸಾರಿ ವಿವಾಹವಾಗಿ ಬಂದ ವಧುವನ್ನು ಛೇಡಿಸಲಾಗುತ್ತದೆ. ನೀನು ತಂದ ಜಹೇಝ್(ಬಹುಮಾನ ಸಾಮಗ್ರಿಗಳು) ಬಹಳ ಕಡಿಮೆ ಎಂದು. ಮೇಲಿನ ಸಂಭವದಲ್ಲಿ ಹುಡುಗಿಯರ ಭಾವನೆಗಳಿಗೆ ನೋವನ್ನುಂಟು ಮಾಡುವವರಿಗೆ ನೀತಿಪಾಠವಿದೆ. ಅದೇರೀತಿ ಹುಡುಗಿಯ ಕುಟುಂಬದವರಿಗೆ ಸಹ ನೀತಿಪಾಠವಿದೆ- ನೀವು ನಿಮ್ಮ ಸ್ಥಿತಿಗತಿಗೆ ಅನುಸಾರವಾಗಿ ಬಹುಮಾನ ಸಾಮಗ್ರಿಗಳನ್ನು ನೀಡಿರಿ ಎಂದು. ಸಾಧ್ಯವಿರುವಷ್ಟು ಆವಶ್ಯಕವಾಗಿ ಕೊಡಿರಿ. ಆದರೆ ಅನಾವಶ್ಯಕವಾಗಿ ತಮ್ಮ ಮೇಲೆ ಭಾರ ಹೇರಬಾರದು.

ವಿವಾಹದ ಪ್ರಸ್ತಾಪ ಬಂದಾಗ ಇಸ್ತಿಖಾರ ಪ್ರಾರ್ಥನೆ ಮಾಡುವ ಮೊದಲು ಹುಡುಗಿಯನ್ನು ನೋಡಬೇಕು. ಇದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶವನ್ನು ಹಝ್ರತ್ ಅಬೂ ಹುರೈರ ರಝಿಯಲ್ಲಾಹು ಹೀಗೆ ವರದಿ ಮಾಡಿದ್ದಾರೆ: ಒಮ್ಮೆ ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪದಲ್ಲಿದ್ದಾಗ ಅವರ ಬಳಿಗೆ ಒಬ್ಬ ವ್ಯಕ್ತಿ ಬಂದು ಹೇಳಿದರು: ಅನ್‌ಸಾರ್‌ಗಳಿಗೆ ಸೇರಿದ ಒಬ್ಬ ಮಹಿಳೆಗೆ ನಾನು ವಿವಾಹದ ಪ್ರಸ್ತಾಪವನ್ನು ಕಳುಹಿಸಿದ್ದೇನೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀವು ಆ ಮಹಿಳೆಯನ್ನು ನೋಡಿದ್ದೀರಾ? ಆ ವ್ಯಕ್ತಿ ಇಲ್ಲ ಎಂದು ಹೇಳಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಆಕೆಯನ್ನು ನೋಡಿರಿ. ಏಕೆಂದರೆ ಅನ್‌ಸಾರ್‌ಗಳ ದೃಷ್ಟಿಯಲ್ಲಿ ಕೆಲವು ವಿಷಯಗಳಿರುತ್ತವೆ.

ಆದುದರಿಂದ ಮದುವೆಯಾಗಲಿರುವ ಹುಡುಗಿಯನ್ನು ನೋಡುವುದು ತಪ್ಪಲ್ಲ. ಆದರೆ ಕೆಲವು ಹುಡುಗರ ಕಡೆಯವರು ತಮ್ಮ ಅಹಂಭಾವದಿಂದ ತಮ್ಮ ಪುತ್ರರೊಂದಿಗೆ ಹೋಗುತ್ತಾರೆ. ಅಲ್ಲಿ ಅವರ ಮಾತು ವಿಚಿತ್ರ ರೀತಿಯಲ್ಲಿರುತ್ತದೆ. ಅದರ ಮೊದಲು ಹುಡುಗಿಯ ಫೋಟೋ ನೋಡಿದ್ದರೂ ಮಾಹಿತಿಗಳನ್ನು ಪರಸ್ಪರ ಹಂಚಿಕೊಂಡಿದ್ದರೂ ನಿರ್ಧಾರವನ್ನು ತೂಗಾಡಿಸುತ್ತಾರೆ. ಲೌಕಿಕವಾಗಿ ಬೇರೆ ಯಾವುದಾದರೂ ಉತ್ತಮ ಸಂಬಂಧ ದೊರೆತರೆ ಮೊದಲು ಸ್ಥಾಪಿಸಿದ ಸಂಬಂಧವನ್ನು ಮುರಿದುಬಿಡುತ್ತಾರೆ. ಇದು ತಪ್ಪು ಕ್ರಮವಾಗಿದೆ.

ವಿವಾಹದ ಉದ್ದೇಶವೇನೆಂದು ನಮಗೆ ಇಸ್ಲಾಮ್ ಧರ್ಮ ಕಲಿಸಿಕೊಟ್ಟಿದೆ. ಅದರ ಪ್ರಕಾರ ವರ್ತಿಸಿದರೆ ಹುಡುಗಿಯರ ಭಾವನೆಗಳಿಗೆ ನೋವಾಗಲಾರದು. ಹುಡುಗನ ಕಡೆಯವರು ಅಹಂಭಾವದಿಂದ ಭಾವನೆಗಳಿಗೆ ನೋವನ್ನುಂಟುಮಾಡಲಾರರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವಾಹದ ಉದ್ದೇಶಲಕ್ಷ್ಯಗಳ ಬಗ್ಗೆ ಹೇಳುತ್ತಾರೆ: ನಮಗೆ ಪವಿತ್ರ ಖುರ್‌ಆನ್ ಉಪದೇಶಿಸಿರುವುದೇನೆಂದರೆ ಚಾರಿತ್ರ್ಯವಂತರಾಗಲು ನೀವು ವಿವಾಹವಾಗಿರಿ ಎಂದು. ವಿವಾಹವಾದ ನಂತರ ಸಾತ್ವಿಕರಾದ ಮಕ್ಕಳು ಹುಟ್ಟಲಿ ಎಂದು ಪ್ರಾರ್ಥಿಸಿರಿ ಎಂದು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: **ಮುಹ್‌ಸಿನೀನ ಗೈರ ಮುಸಾಫಿಹೀನ** ಎಂದರೆ ನಿಮ್ಮ ವಿವಾಹ ಹೇಗೆ ಆಗಬೇಕೆಂದರೆ ನೀವು ತಖ್ವ ಮತ್ತು ಚಾರಿತ್ರ್ಯವಂತಿಕೆಯ ಕೋಟೆಯಲ್ಲಿ ಪ್ರವೇಶಿಸಬೇಕು. **ಮುಹ್‌ಸಿನೀನ್** ಎಂಬ ಶಬ್ದ ಸೂಚಿಸುವುದೇನೆಂದರೆ ವಿವಾಹವಾಗದವನು ಆಧ್ಯಾತ್ಮಿಕ ವಿಪತ್ತುಗಳಿಗೆ ಬೀಳುತ್ತಾನಲ್ಲದೆ ಶಾರೀರಿಕ ಹಾಗೂ ಲೌಕಿಕ ವಿಪತ್ತುಗಳಲ್ಲೂ ಸಿಲುಕಿಕೊಳ್ಳುತ್ತಾನೆ. ಆದುದರಿಂದ ಪವಿತ್ರ ಖುರ್‌ಆನ್‌ನಿಂದ ಸಾಬೀತಾಗುವುದೇನೆಂದರೆ ವಿವಾಹದಲ್ಲಿ ಮೂರು ಪ್ರಯೋಜನಗಳಿವೆ. ಆ ಉದ್ದೇಶಕ್ಕಾಗಿ ವಿವಾಹವಾಗಬೇಕು.

ಅವುಗಳು ಯಾವುವು? ಒಂದನೆಯದು ಚಾರಿತ್ರ್ಯವನ್ನು ಗಳಿಸುವುದು. ಎರಡನೆಯದು ಆರೋಗ್ಯದ ಸಂರಕ್ಷಣೆ. ಮೂರನೆಯದು ಸಂತಾನ ಪಡೆಯುವುದು. ಈ ವಿಷಯಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳುವುದಾದರೆ ಸಂಬಂಧ ಸ್ಥಾಪಿಸುವಾಗ ಸಮಸ್ಯೆಗಳು ತಲೆದೋರಲಾರವು. ಆದುದರಿಂದ ಮನುಷ್ಯನು ಲೌಕಿಕ ವಿಷಯಗಳನ್ನು ನೋಡುವ ಬದಲು ಧರ್ಮವನ್ನು ನೋಡಬೇಕು. ಅನಂತರ ಮೇಲೆ ವಿವರಿಸಿದ ವಿಷಯಗಳನ್ನು ದೃಷ್ಟಿಯಲ್ಲಿರಿಸಿ ವಿವಾಹ ಮಾಡಬೇಕು.

ಕೆಲವು ಮನೆಗಳಲ್ಲಿ ಜಗಳ ಉಂಟಾಗುವ ಕಾರಣವೇನೆಂದರೆ ಹುಡುಗಿ ವಿವಾಹಿತೆಯಾಗಿ ಬಂದಾಗ ಅವಳ ಪತಿಗೆ ಸ್ವಂತ ಮನೆ ಇರುವುದಿಲ್ಲ; ಅವನು ತನ್ನ ತಂದೆ ತಾಯಂದಿರ ಜೊತೆಗಿರುತ್ತಾನೆ. ಕೆಲವು ಸಾರಿ ಸ್ವಂತ ಮನೆ ಹೊಂದಲು ಹುಡುಗನಿಗೆ ಆದಾಯವಿರುವುದಿಲ್ಲ. ಹುಡುಗ ವಿದ್ಯಾರ್ಥಿಯಾಗಿದ್ದರೆ ತಂದೆ ತಾಯಂದಿರ ಜೊತೆ ಇರಬೇಕಾಗುತ್ತದೆ. ಪತಿಗೆ ಸ್ವಂತ ಮನೆ ಮಾಡುವಷ್ಟು ಆದಾಯವಿಲ್ಲ ಅಥವಾ ಬೇರೆ ಕಾರಣಗಳಿಂದ ಸಾಧ್ಯವಿಲ್ಲ ಎಂದು ಹುಡುಗಿ ತಿಳಿದಿರಬೇಕು ಮತ್ತು ಸ್ವಲ್ಪಕಾಲ ಅತ್ತೆ ಮನೆಯಲ್ಲಿ ವಾಸವಿರಬೇಕು. ಆದರೆ ಕೆಲವು ಹುಡುಗರು ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ. ಅವರು ತಮ್ಮ ತಂದೆ ತಾಯಂದಿರ ಒತ್ತಡದ ಕಾರಣದಿಂದ ಅವರೊಂದಿಗೆ ವಾಸಿಸುತ್ತಾರೆ. ವಾಸ್ತವಿಕವಾಗಿ ಅವರಿಗೆ ಬೇರೆ ಮನೆ ಮಾಡಲು ಸಾಧ್ಯವಿದ್ದರೂ ಹೀಗೆ ವರ್ತಿಸುತ್ತಾರೆ. ಇಸ್ಲಾಮ್ ಇದರ ಬಗ್ಗೆ ಏನು ಹೇಳುತ್ತದೆ ಎಂದು ನೋಡುವುದಾದರೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ:

**ಲೈಸ ಅಲಲ್ ಅಅ್‌ಮಾ ಹರಜುನ್ ವಲಾ ಅಲಲ್ ಅಅ್‌ರಜಿ ಹರಜುನ್ ವಲಾ ಅಲಲ್‌ಮರೀಝಿ ಹರಜುನ್ ವಲಾ ಅಲಾಅನ್‌ಫುಸಿಕುಮ್ ಅನ್‌ತಅ್‌ಕುಲೂ ಮಿನ್ ಬುಯೂತಿಕುಮ್. ಅವ್ ಬುಯೂತಿ ಆಬಾಇಕುಮ್ ಅವ್ ಬುಯೂತಿ ಉಮ್ಮಹಾತಿಕುಮ್.**

ಅಂಧ, ಕುಂಟ, ರೋಗಿ ಇವರು ಮಾತ್ರವಲ್ಲ ನೀವು ಕೂಡ ನಿಮ್ಮ ಮನೆಗಳಿಂದಾಗಲಿ, ನಿಮ್ಮ ತಂದೆ ತಾತಂದಿರ ಮನೆಗಳಿಂದಾಗಲಿ ನಿಮ್ಮ ತಾಯಂದಿರ ಮನೆಗಳಿಂದಾಗಲಿ ಉಣ್ಣುವುದರಲ್ಲಿ ತಪ್ಪೇನಿಲ್ಲ. (24:62).

ಹಝ್ರತ್ ಖಲೀಫತುಲ್ ಮಸೀಹ್ ಬಹಳ ಸುಂದರವಾಗಿ ಈ ವಚನವನ್ನು ವ್ಯಾಖ್ಯಾನಿಸಿ ಹೇಳುತ್ತಾರೆ: ಹಿಂದೂಸ್ಥಾನದಲ್ಲಿ ಬಹುತೇಕ ಜನರು ಅತ್ತೆ ಸೊಸೆಯರ ಜಗಳದ ಬಗ್ಗೆ ದೂರು ನೀಡುತ್ತಾರೆ. ಪವಿತ್ರ ಖುರ್‌ಆನಿನ ಉಪದೇಶ ಪ್ರಕಾರ ವರ್ತಿಸುವುದಾದರೆ ಹೀಗೆ ಆಗಲಾರದು. ಮೇಲೆ ಉಲ್ಲೇಖಿಸಿದ ವಚನದಲ್ಲಿ ಮನೆಗಳು ಬೇರೆ ಬೇರೆ ಇರಬೇಕೆಂದು ಸೂಚಿಸಲಾಗಿದೆ. ತಾಯಿಯ ಮನೆ ಬೇರೆ ಇರಬೇಕು. ವಿವಾಹಿತ ಮಕ್ಕಳ ಮನೆ ಬೇರೆ ಇರಬೇಕು. ಬೇರೆ ಬೇರೆ ಮನೆಗಳಿದ್ದರೂ ಊಟಮಾಡಲು ಅನುಮತಿ ನೀಡಲಾಗಿದೆ. ಆದುದರಿಂದ ಅನಿವಾರ್ಯ ಕಾರಣಗಳಿರುವಾಗ ಹೊರತು ಮನೆಗಳು ಬೇರೆ ಬೇರೆ ಇರಬೇಕು. ಮನೆಗಳು ಬೇರೆ ಬೇರೆಯಾಗಿರುವಾಗ ಅತ್ತೆ–ಸೊಸೆ, ಸೊಸೆ–ನಾದಿನಿಯರ ಜಗಳ ಕೊನೆಗೊಳ್ಳುತ್ತದೆ. ಹುಡುಗ ಮತ್ತು ಹುಡುಗಿಗೆ ತಮ್ಮ ಹೊಣೆಗಾರಿಕೆಗಳ ಬಗ್ಗೆ ಪ್ರಜ್ಞೆ ಸಹ ಉಂಟಾಗುವುದು.

ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: **ಆಶಿರೂಹುನ್ನ ಬಿಲ್‌ಮಅ್‌ರೂಫಿ ಫಇನ್ ಕರಿಹ್‌ತುಮೂಹುನ್ನ ಫಅಸಾ ಅನ್‌ತಕ್‌ರಹೂ ಶೈಅನ್ ವಯಜ್‌ಅಲಲ್ಲಾಹು ಫೀಹಿ ಖೈರನ್‌ಕಸೀರನ್.** ನೀವು ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ, ನೀವು ಅವರನ್ನು ಇಷ್ಟಪಡುವುದಿಲ್ಲವಾದರೆ(ನೆನಪಿಡಿರಿ) ಅಲ್ಲಾಹನು ಧಾರಾಳ ಒಳಿತನ್ನು ಇಟ್ಟಿರುವ ಒಂದು ವಸ್ತುವನ್ನು ನೀವು ಮೆಚ್ಚುವುದಿಲ್ಲವೆಂದಾಗಲೂಬಹುದು. (4:20).

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಪವಿತ್ರ ಖುರ್‌ಆನಿನ ಈ ವಚನವನ್ನು ವ್ಯಾಖ್ಯಾನಿಸುತ್ತಾ ಹೇಳುತ್ತಾರೆ: ಪ್ರಿಯರೇ ನೀವು ನಿಮ್ಮ ಪತ್ನಿಯ ಯಾವುದಾದರೂ ವಿಷಯವನ್ನು ಇಷ್ಟಪಡುವುದಿಲ್ಲವಾದರೂ ನೀವು ಆಕೆಯೊಂದಿಗೆ ಉತ್ತಮವಾಗಿಯೇ ವರ್ತಿಸಿರಿ. ಅಲ್ಲಾಹನು ಹೇಳುತ್ತಾನೆ ನಾವು ಅವಳಲ್ಲಿ ಒಳಿತನ್ನು ಹಾಕಿಕೊಡುವೆವು. ಒಂದು ವಿಷಯ ನಿಮಗೆ ಇಷ್ಟಕರವಾಗಿಲ್ಲವಾದರೂ ಅದು ವಾಸ್ತವಿಕವಾಗಿ ಉತ್ತಮವಾಗಿರಲು ಸಾಧ್ಯವಿದೆ. ತಮ್ಮ ಪತ್ನಿಯರನ್ನು ತ್ಯಜಿಸಲು ಆತುರಪಡುವವರಿಗೆ, ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸದವರಿಗೆ, ಪತ್ನಿಯ ಭಾವನೆಗಳ ಬಗ್ಗೆ ಲಕ್ಷ್ಯ ನೀಡದವರಿಗೆ, ಪತ್ನಿಯ ಕೆಲವು ವಿಷಯಗಳನ್ನು ಕೆಟ್ಟದಾಗಿ ಪರಿಗಣಿಸಿ ಅವರೊಂದಿಗೆ ತಪ್ಪಾಗಿ ವರ್ತಿಸುವವರಿಗೆ ಈ ಪವಿತ್ರ ಖುರ್‌ಆನ್ ವಚನದಲ್ಲಿ ಉಪದೇಶವಿದೆ. ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸಬೇಕೆಂದು ಹೇಳಲಾಗಿದೆ.

ಪುರುಷರು ದ್ವಿತೀಯ ವಿವಾಹವಾಗುವ ಕಾರಣ ಅಥವಾ ದ್ವಿತೀಯ ವಿವಾಹದ ಇಚ್ಛೆಯ ಕಾರಣ ಕೆಲವು ಸಾರಿ ಸಮಸ್ಯೆಗಳು ತಲೆದೋರುತ್ತವೆ. ಮನೆಗಳಲ್ಲಿ ಜಗಳಗಳು ನಡೆಯುತ್ತವೆ. ಪುರುಷರು ನೆನಪಿಡಬೇಕಾದುದೇನೆಂದರೆ ದ್ವಿತೀಯ ವಿವಾಹ ಮಾಡಲು ಇಸ್ಲಾಮ್‌ನಲ್ಲಿ ಅನುಮತಿ ನೀಡಲಾಗಿದ್ದರೂ ಅದು ಕೆಲವು ಶರತ್ತುಗಳಿಗೆ ಮತ್ತು ಅನುಮತಿಸಲಾದ ಆವಶ್ಯಕತೆಗಳಿಗೆ ಒಳಪಟ್ಟಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದರ ಬಗ್ಗೆ ಸವಿವರವಾಗಿ ಮಾರ್ಗದರ್ಶನ ನೀಡಿದ್ದಾರೆ. ಅವುಗಳನ್ನು ಗಮನಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಅಲ್ಲಾಹನು ಮುಖ್ಯವಾಗಿ ಇಚ್ಛಿಸುವುದೇನೆಂದರೆ ನಿಮ್ಮ ಮೇಲೆ ಭೋಗಲಾಲಸೆ ಜಯಗಳಿಸಬಾರದೆಂದು. ತಖ್ವವನ್ನು ಪರಿಪೂರ್ಣಗೊಳಿಸಲು ಆವಶ್ಯಕವಾಗಿದ್ದರೆ ಇನ್ನೊಂದು ವಿವಾಹವಾಗಿರಿ. ಎರಡನೆಯ ವಿವಾಹವಾಗುವುದು ಸಹ ತಖ್ವದ ಕಾರಣದಿಂದಾಗಬೇಕು. ದ್ವಿತೀಯ ವಿವಾಹ ಅನುಮತಿಸಲಾಗಿದೆ. ಆದರೆ ದ್ವಿತೀಯ ವಿವಾಹವಾಗಲು ಬಯಸುವ ಎಲ್ಲರೂ ಪರಿಶೋಧಿಸಬೇಕಾದುದು ಆವಶ್ಯಕವಾಗಿದೆ. ದ್ವಿತೀಯ ವಿವಾಹವಾಗುವುದು ತಖ್ವದ ಅಸ್ತಿಭಾರದ ಮೇಲೆಯೋ ಅಥವಾ ಇಂದ್ರಿಯಾಸಕ್ತಿಯ ಕಾರಣದಿಂದಲೋ ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನೀವು ತಿಳಿದುಕೊಳ್ಳಬೇಕಾದುದೇನೆಂದರೆ ಯಾವ ವ್ಯಕ್ತಿ ಭೋಗಲಾಲಸೆಯಿಂದ ಹೆಚ್ಚು ಪತ್ನಿಯರನ್ನು ಹೊಂದಲು ಇಚ್ಛಿಸುತ್ತಾನೋ ಅವನು ಇಸ್ಲಾಮಿನ ತಿರುಳಿನಿಂದ ದೂರ ಸರಿದಿರುತ್ತಾನೆ. ಉದಿಸುವ ಪ್ರತಿ ಹಗಲು ಮತ್ತು

ಆಗಮಿಸುವ ಪ್ರತಿ ರಾತ್ರಿ ಒಬ್ಬನು ಕಹಿ ಜೀವಿತ ಅನುಭವಿಸುವುದಿಲ್ಲವಾದರೆ, ಕಡಿಮೆ ಅಳುತ್ತಾನಾದರೆ, ಅಥವಾ ಅಳುವುದೇ ಇಲ್ಲವಾದರೆ, ಹೆಚ್ಚು ನಗುತ್ತಾ ಇರುತ್ತಾನಾದರೆ ನೀವು ನೆನಪಿಡಿರಿ ಅವನು ವಿನಾಶಕ್ಕೆ ಗುರಿಯಾಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಹಿಳೆಯರಿಗೆ ಸಹ ಹೀಗೆ ಉಪದೇಶಿಸಿದ್ದಾರೆ: ಅನುಮತಿಸಲಾದ ಆವಶ್ಯಕತೆಗೋಸ್ಕರ ಪುರುಷ ದ್ವಿತೀಯ ವಿವಾಹವಾಗಲು ಇಚ್ಛಿಸಿದರೆ ನೀವು ಆಕ್ಷೇಪಿಸಬಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಹಿಳೆಯರೊಂದಿಗೆ ಹೀಗೆ ಸಹ ಹೇಳಿದ್ದಾರೆ: ನೀವು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ, ನಿಮಗೆ ಇಂತಹ ಕಷ್ಟ ಬರದಿರಲಿ ಎಂದು. ನಮ್ಮ ಈ ಕಾಲಘಟ್ಟದಲ್ಲಿ ಮಹಿಳೆಯರು ಕೆಲವು ನವೀನಾಚರಣೆಗಳಲ್ಲಿ ಸಿಲುಕಿದ್ದಾರೆ. ಅವರು ಬಹುಭಾರ್ಯತ್ವವನ್ನು ಬಹಳ ಕೆಟ್ಟ ದೃಷ್ಟಿಯಿಂದ ನೋಡುತ್ತಾರೆ. ಅವರಿಗೆ ಅದರ ಬಗ್ಗೆ ವಿಶ್ವಾಸವೇ ಇರುವುದಿಲ್ಲ. ಅಲ್ಲಾಹನ ಶರೀಅತ್ ಪ್ರತಿಯೊಂದು ವಿಧದ ಚಿಕಿತ್ಸೆ ತನ್ನೊಳಗೆ ಹೊಂದಿದೆ ಎಂದು ಅವರಿಗೆ ತಿಳಿದಿಲ್ಲ. ಇಸ್ಲಾಮ್‌ನಲ್ಲಿ ಬಹುಭಾರ್ಯತ್ವಕ್ಕೆ ಅನುಮತಿ ಇಲ್ಲದಿರುತ್ತಿದ್ದರೆ, ಪುರುಷನಿಗೆ ದ್ವಿತೀಯ ವಿವಾಹದ ಆವಶ್ಯಕತೆ ಇರುವಾಗ ಶರೀಅತ್‌ನಲ್ಲಿ ಅದಕ್ಕೆ ಪರಿಹಾರವಿರದಿದ್ದರೆ, ಉದಾಹರಣೆಗೆ ಪತ್ನಿ ಮಾನಸಿಕ ರೋಗಿಯಾಗಿದ್ದರೆ, ಕುಷ್ಠರೋಗಿಯಾಗಿದ್ದರೆ, ಅಥವಾ ವಾಸಿಯಾಗದ ರೋಗಬಾಧಿತಳಾಗಿದ್ದರೆ, ಅಥವಾ ಪತ್ನಿ ದಯಾರ್ಹಳಾಗಿ ನಿಷ್ಪ್ರಯೋಜಕಳಾಗಿದ್ದರೆ ಪುರುಷನು ಪತ್ನಿರಹಿತನಾಗಿರಲು ಸಹನೆ ಇರದವನಾಗಿದ್ದರೆ, ಇಂತಹ ಸಂದರ್ಭಗಳಲ್ಲಿ ಪುರುಷನಿಗೆ ದ್ವಿತೀಯ ವಿವಾಹಕ್ಕೆ ಅನುಮತಿ ನೀಡದಿರುವುದು ಪುರುಷನ ಮೇಲೆ ಮಾಡುವ ದೌರ್ಜನ್ಯವಾಗುತ್ತದೆ. ವಾಸ್ತವಿಕವಾಗಿ ಅಲ್ಲಾಹನ ಶರೀಅತ್ ಈ ಎಲ್ಲಾ ವಿಷಯಗಳನ್ನು ಗಮನದಲ್ಲಿರಿಸಿ ಪುರುಷರಿಗೆ ದ್ವಿತೀಯ ವಿವಾಹದ ಮಾರ್ಗ ತೆರೆದಿಟ್ಟಿದೆ. ಅದೇರೀತಿ ಮಹಿಳೆಯರಿಗೆ ಸಹ ಅನುಮತಿ ನೀಡಲಾಗಿದೆ. ಪತಿ ನಿಷ್ಪ್ರಯೋಜಕನಾದರೆ ನ್ಯಾಯಾಧಿಕಾರಿ ಮೂಲಕ ಖುಲಾ ಪಡೆಯಬಹುದಾಗಿದೆ. ಅದು ತಲಾಖ್‌ಗೆ ಬದಲಾಗಿ ಮಹಿಳೆಯರಿಗೆ ನೀಡಿದ ಸವಲತ್ತು ಆಗಿದೆ.

ಅಲ್ಲಾಹನು ಜಮಾಅತಿನ ಸದಸ್ಯರಿಗೆ, ಪುರುಷರಿಗೆ ಮತ್ತು ಮಹಿಳೆಯರಿಗೆ ಬುದ್ಧಿಯನ್ನೂ ಭಾಗ್ಯವನ್ನೂ ನೀಡಲಿ. ಅವರು ತಮ್ಮ ಕುಟುಂಬದ ಸಮಸ್ಯೆಗಳನ್ನು ಅಲ್ಲಾಹನು ನೀಡಿದ ಉಪದೇಶಗಳ ಪ್ರಕಾರ ಪರಿಹರಿಸುವವರಾಗಲಿ. ಅವರು ಲೌಕಿಕ ಅಭಿಲಾಷೆಗಳ ಮೇಲೆ ಧರ್ಮಕ್ಕೆ ಆದ್ಯತೆ ನೀಡುವವರಾಗಲಿ. ಅಲ್ಲಾಹನ ಬಗ್ಗೆ ಭಯ ಮತ್ತು ತಖ್ವ ಯಾವಾಗಲೂ ತಮ್ಮ ದೃಷ್ಟಿಯಲ್ಲಿರಿಸುವವರಾಗಲಿ. ಇದೇ ರೀತಿ ಹೊಸ ವಿವಾಹ ಸಂಬಂಧಗಳ ಪ್ರಶ್ನೆಗಳು ಸಹ ದೂರಸರಿಸಲ್ಪಡಲಿ. ಅನೇಕ ಪ್ರಶ್ನೆಗಳು ತಲೆದೋರುತ್ತಿವೆ. ಹುಡುಗರಿಗೆ ಮತ್ತು ಹಡುಗಿಯರಿಗೆ ಅಲ್ಲಾಹನು ಮನವರಿಕೆ ಮಾಡಿಕೊಡುವವನಾಗಲಿ; ವಿವಾಹವಾಗುವುದು ಲೌಕಿಕ ಆಶಾಭಿಲಾಷೆಗಳನ್ನು ಈಡೇರಿಸಿಕೊಳ್ಳಲು ಮಾತ್ರವಲ್ಲ, ಅದರ ಉದ್ದೇಶ ಧರ್ಮಕ್ಕೆ ಆದ್ಯತೆ ನೀಡಿ ಮುಂದಿನ ಸಂತಾನವನ್ನು ಧರ್ಮದ ಮಾರ್ಗದಲ್ಲಿ ಚಲಾಯಿಸುವಂತೆ ಮಾಡಲಿಕ್ಕಾಗಿದೆ. ಮತ್ತು ಸಾತ್ವಿಕ ಪೀಳಿಗೆ ಜನಿಸುವಂತೆ ಮಾಡಲಿಕ್ಕಾಗಿದೆ ಎಂದು. ಆ ಮೂಲಕ ಮುಂದಿನ ಪೀಳಿಗೆ ಸಂರಕ್ಷಿಸಲ್ಪಡಲಿ. ಮತ್ತು ಇಸ್ಲಾಮಿಗೆ ಸೇವೆ ಸಲ್ಲಿಸುವವರಾಗಲಿ. ಆ ರೀತಿ ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗಲಿ – ಆಮೀನ್.

(ಖುತ್‌ಬದ ಕೊನೆಗೆ: 1. ಮುಕರ್ರಮ್ ಮುಹಮ್ಮದ್ ನತಾಝ್ ಮೂಮಿನ್ ಸಾಹಿಬ್. ವಾಕಿಫೆ ಝಿಂದಗಿ, 2. ಮುಕರ್ರಮ್ ಸಯ್ಯಿದ್ ರಫೀಖ್ ಅಹ್ಮದ್ ಸಫೀರ್ ಸಾಹಿಬ್. ಸದರ್ ಜಮಾಅತ್ ಸರ್‌ಹಟನ್, ಇವರಿಬ್ಬರ ನಮಾಝೆ ಜನಾಝ ಹಾಝಿರ್. ಮತ್ತು 1. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಮೊಮ್ಮಗ ಮುಕರ್ರಮ್ ಡಾಕ್ಟರ್ ಮಿರ್ಝಾ ಲಈಖ್ ಅಹ್ಮದ್ ಸಾಹಿಬ್, 2. ಮುಕರ್ರಮ್ ಅಮೀನುಲ್ಲಾ ಖಾನ್ ಸಾಹಿಬ್ ಸಾಲಿಕ್, ಮಾಜಿ ಮಿಶನರಿ ಯು.ಎಸ್.ಎ. ಇವರಿಬ್ಬರ ನಮಾಝೆ ಜನಾಝ ಗಾಯಿಬ್ ಜುಮುಅ ನಮಾಝ್ ನಂತರ ನಿರ್ವಹಿಸುವುದಾಗಿ ಹುಝೂರ್ ಪ್ರಕಟಿಸಿದರು.)

———————*****———————


***Friday Sermon delivered by Hadrath Khaleefatul Masih Al Khamis***$^{(atba)}$

*At, Masjid Baithul Futhuh, London on 03-03-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon